# ದಾಸರೆಂದರೆ ಪುರಂದರದಾಸರಯ್ಯಾ....

ಡಾ. ಟಿ. ಎನ್. ನಾಗರತ್ನ

*( ಹಿಂದಿನ ಸಂಚಿಕೆಯಿಂದ )*

**ಭ**ಗವಂತನೊಂದಿಗೆ ಮಾನವ ಸಂಬಂಧಗಳನ್ನು ಕಲ್ಪಿಸಿಕೊಂಡು ಅವನನ್ನು ಒಡೆಯ, ಗೆಳೆಯ, ಎಳೆಯ ಹಾಗೂ ಇನಿಯನನ್ನಾಗಿ ಕಂಡು ಆರಾಧಿಸಿದ ಪುರಂದರದಾಸರ ಮನಸ್ಸು ಒಂದು ಹಂತದಲ್ಲಿ ಅವನನ್ನು ಕಾಣಲು, ತಮ್ಮ ಮನೋಮಂದಿರದಲ್ಲಿ ನೆಲೆನಿಲ್ಲಿಸಲು ಹಂಬಲಿಸತೊಡಗುತ್ತದೆ. ಪರಿಣಾಮ ಶ್ರೀಹರಿಯನ್ನು ಕನಸಿನಲ್ಲಿ ಕಂಡ ಅನುಭವ ಅವರಿಗಾಗಿದೆ. **ಕಂಡೆ ನಾ ಕನಸಿನಲಿ ಗೋವಿಂದನ** ಎಂದು ಆನಂದಿಸುತ್ತ ಆ ದಿವ್ಯಮೂರ್ತಿಯ ರೂಪಾಲಂಕಾರಗಳನ್ನು ಅವರು ಬಣ್ಣಿಸುವರು. ಮುಂದೆ ಕನಸಿನಲ್ಲಿ ಕಂಡ ಭಗವನ್ಮೂರ್ತಿ ಸಾಕ್ಷಾತ್ತಾಗಿ ಎದುರಿಗೇ ಬಂದು ನಿಂತಂತಾಗಿದೆ. **ಕಣ್ಣಾರೆ ಕಂಡೆ ಅಚ್ಯುತನ, ಕೃಷ್ಣಮೂರ್ತಿ ಕಣ್ಣಮುಂದೆ ನಿಂತಿದಂತಿದೆ** ಎಂದು ಭಾವಪರವಶರಾಗಿ ಹಾಡತೊಡಗುವರು. **ಕಂಡು ಧನ್ಯನಾದೆ ನಾನು** ಎಂದು ತೃಪ್ತರಾಗಿರುವರು. ಒಮ್ಮೆ ಭಗವಂತನನ್ನು ಕಂಡ ಅನುಭವವಾದ ನಂತರ ಕಂಡದ್ದೆಲ್ಲ ಹರಿಮೂರ್ತಿ; ಉಂಡು ಉಟ್ಟದ್ದೆಲ್ಲ ಹರಿಪೂಜೆ.

**ಇಂದಿನ ದಿನವೇ ಶುಭದಿನವು**
**ಇಂದಿನ ವಾರ ಶುಭವಾರ**
.................
**ಇಂದು ಪುರಂದರವಿಠಲನ**
**ಸಂದರುಶನವೆನಗಾಯಿತು**

ಎಂದು ಬೀಗಿದ್ದಾರೆ. ಮನಸ್ಸಿನ ಕಳವಳ, ಕಾತರಗಳೆಲ್ಲ ಕಳೆದು ಮನಸ್ಸು ಹಗುರವಾದ, ನಿರಾಳವಾದ ಅನುಭವ. ದಾಸರ ಜೀವನದ ಬಹುಮುಖ್ಯವಾದ ಹಂತ ಅವರಿಗಾದ ಈ ದೈವ ಸಾಕ್ಷಾತ್ಕಾರ.

ತಮ್ಮ ಈ ಭಕ್ತಿಸಾಧನೆಯ ಫಲವನ್ನು ಸಮಾಜದಲ್ಲಿಯ ಇತರರಿಗೂ ಹಂಚುವ, ಅವರ ಬದುಕನ್ನೂ ಉತ್ತಮಪಡಿಸುವ ಆಶಯ ದಾಸರದು. ಕಾಲಿಗೆ ಗೆಜ್ಜೆ ಕಟ್ಟಿ, ಕೈಲಿ ತಂಬೂರಿ ಹಿಡಿದು ಹರಿಮಹಿಮೆಗಳನ್ನು ಹಾಡುತ್ತ, ಎಲ್ಲರನ್ನೂ 'ಅಣ್ಣ' 'ಅಕ್ಕ', 'ಖೋಡಿ', 'ಹುಚ್ಚಪ್ಪಾ' ಎಂದು ಆತ್ಮೀಯವಾಗಿ ಕರೆಯುತ್ತಾ, ನಡೆ-ನುಡಿ ಒಂದಾದ ಮೌಲಿಕ ಬದುಕನ್ನು ಬೋಧಿಸುತ್ತ ಬೀದಿ ಬೀದಿಗಳಲ್ಲಿ, ಮನೆಮನೆಗಳಲ್ಲಿ ಅಡ್ಡಾಡಿದ್ದಾರೆ. ಮನುಷ್ಯನ ನೆಮ್ಮದಿ ಕೆಡಿಸುವ ವಸ್ತುಗಳು ಹೆಣ್ಣು, ಹೊನ್ನು ಮತ್ತು ಮಣ್ಣು – ಬಾಳು ಹಾಳಾಗಲು ಇವುಗಳಲ್ಲಿ ಒಂದೊಂದರ ವ್ಯಾಮೋಹವೇ ಸಾಕು ಎಂದು ಸರಿಯಾಗಿಯೇ ಗುರುತಿಸಿದ್ದಾರೆ. ತಾಯಿ ತಂಗಿ ಹೆಂಡತಿ – ಈ ಎಲ್ಲ ರೂಪಗಳಿಂದಲೂ ಹೆಣ್ಣು ಮೋಹವನ್ನು ಬೆಳೆಸುತ್ತದೆ, ಸಹಜ. ಆದರೆ ಪರಹೆಣ್ಣಿನ ವ್ಯಾಮೋಹ ಬೆಂಕಿಯಿದ್ದಂತೆ. ಹೆಣ್ಣಿನಿಚ್ಛಿಸಿದ ರಾವಣ ಕೀಚಕರೇನಾದರು? 'ರೊಕ್ಕ'ವಂತೂ ಇಹಪರಗಳೆರಡರಲ್ಲೂ ದುಃಖವುಂಟುಮಾಡುವಂಥದು; ಸಲ್ಲದ ದುರ್ಗುಣಗಳನ್ನೆಲ್ಲ ಕಲಿಸುವಂಥದು; ಮಂಗನನ್ನೂ ಮನ್ಮಥನಾಗಿಸುವ ಶಕ್ತಿಯುಳ್ಳದ್ದು. ಎಲ್ಲ ವಸ್ತುಗಳನ್ನೂ ಇದ್ದಲ್ಲೆ ತರಿಸುವ ಸಾಮರ್ಥ್ಯ ಅದಕ್ಕಿದೆ. ಹಣವನ್ನು ಕೂಡಿಟ್ಟು, ಬೇಕಾದಾಗ ಬೇಕಾದ ವಸ್ತುವಾಗಿ ಪರಿವರ್ತಿಸಿಕೊಳ್ಳಬಹುದು. ಅದರ ಈ ಗುಣದಿಂದಲೇ ಅದಕ್ಕೆ ಅಷ್ಟೊಂದು ಮಹತ್ವ.

ಮಣ್ಣಿನ ಆಸೆಯಂತೂ ಬಿಡಿ. ಪಕ್ಕದ ಮನೆಯವರ ಬೇಲಿ ಒತ್ತರಿಸುವುದರಿಂದ ಹಿಡಿದು ಪಾಕಿಸ್ತಾನ ಕಾಶ್ಮೀರವನ್ನು ಕಬಳಿಸುವವರೆಗೂ ಸೈ. ದುರ್ಯೋಧನನಂಥ ಚಕ್ರವರ್ತಿಗಳೇ ಮಣ್ಣಿನಾಸೆಗಾಗಿ ಕಾದಿ ಮಣ್ಣಾಗಿ ಹೋದರು. ಹೆಣ್ಣು ಹೊನ್ನು ಮಣ್ಣು – ಇವು ಯಾವುದೂ ಶಾಶ್ವತವಲ್ಲವೆಂಬುದನ್ನು ಅನೇಕ ಕೀರ್ತನೆಗಳಲ್ಲಿ ಪುರಂದರದಾಸರು ಮತ್ತೆ ಮತ್ತೆ ಹೇಳಿರುವರು. **ಕಾಗದ ಬಂದಿದೆ ನಮ್ಮ ಕಮಲನಾಭನದು** ಎಂದು ಅಂಚೆ ಹಂಚುವುದನ್ನು ಕಂಡಾಗ ಪ್ರತಿಕ್ರಿಯಿಸಿ ಅದರ ಒಕ್ಕಣೆಯನ್ನು ಜನರಿಗೆ ಹೀಗೆ ಓದಿ ಹೇಳುವರು:

**ಕಾಮಕ್ರೋಧಗಳ ಬಿಡಿರೆಂಬೋ ಕಾಗದ ಬಂದಿದೆ**
**ನೇಮ ನಿಷ್ಠೆಯೊಳಿರಿರೆಂಬೋ ಕಾಗದ ಬಂದಿದೆ**
**ಹೆಣ್ಣು ಹೊನ್ನು ಮಣ್ಣಿನಾಸೆ ಬಿಡಿರೆಂಬೋ ಕಾಗದ ಬಂದಿದೆ.**

ಸ್ವತಃ ಪದುಮನಾಭ ಶ್ರೀಹರಿ ತಾನೇ ಬರೆದ ಕಾಗದವದು! ಹೀಗೆಯೇ **ಡಂಗುರ ಹೊಯ್ಯುವುದು, ಕಾಗೆ ಕೂಗಿದ್ದು, ಬುತ್ತಿ ಕಟ್ಟುವುದು** – ಇಂತಹ, ಜನರಲ್ಲಿ ಹಾಸುಹೊಕ್ಕಾಗಿರುವ ವಿಚಾರಗಳನ್ನು ಪುರಂದರದಾಸರು ತಮ್ಮ ಭಕ್ತಿಪ್ರಸಾರದ, ಉಪದೇಶದ ಮಾಧ್ಯಮಗಳಾಗಿ ಬಳಸಿಕೊಂಡಿರುವುದು, ಅವಕ್ಕೆ ಒಂದು ಆಧ್ಯಾತ್ಮಿಕ ತಿರುವನ್ನು ಕೊಟ್ಟಿರುವುದು ಅವರ ವೈಶಿಷ್ಟ್ಯ. ಒಟ್ಟಿನಲ್ಲಿ ದಾಸರ ದೃಷ್ಟಿಯಲ್ಲಿ ಯಾವುದೂ 'ಅತಿ' ಆಗದ ಹಾಗೆ 'ಮಿತಿ'ಯಲ್ಲಿರುವುದೇ ಒಳ್ಳೆಯ ಬದುಕು. **ಇಷ್ಟು ದೊರಕಿದರೆ ಅಷ್ಟರಾಸೆ, ಅಷ್ಟು ದೊರಕಿದರೆ ಮತ್ತಷ್ಟರಾಸೆ** – ಇದು ಮನುಷ್ಯನ ಮನಸ್ಸಿನ ರೀತಿ. ಆಸೆಯಿರಬೇಕು; ಅತಿಯಾಸೆ ಕೂಡದು, 'ಹೆಂಡತಿಯಿರಬೇಕು; ಅತಿಮೋಹ ಬಿಡಬೇಕು;' ಗೇರುಹಣ್ಣಿನಲ್ಲಿ ಬೀಜವಿರುವಂತೆ, ನೀರಿನಲ್ಲಿ ತಾವರೆ ಯೆಲೆಯಿರುವ ಹಾಗೆ, ಸಂಸಾರದಲ್ಲಿ ಅಂಟಿಯೂ ಅಂಟದ ಹಾಗಿರುವುದು ಜೀವನ ವಿವೇಕ.

**ಈಸಬೇಕು ಇದ್ದು ಜೈಸಬೇಕು**
**ಹೇಸಿಗೆ ಸಂಸಾರದಲ್ಲಿ ಆಶೆಲೇಶ ಮಾಡದ್ಹಾಂಗೆ** ಅಂದರು.

ಅಂದರೆ, ದಾಸರು ಪಲಾಯನವಾದವನ್ನು ಬೋಧಿಸಿಲ್ಲ. 'ಹೇಸಿಗೆ ಸಂಸಾರ' ದಲ್ಲಿ ಆಸೆ ಬೇಡ, ಅಷ್ಟೇ; ಸಂಸಾರವೇ ಹೇಸಿಗೆಯಲ್ಲ. ಪರ

ಹೆಣ್ಣು ಪರಧನ ಪರಮಣ್ಣುಗಳ ಬಯಕೆ, ವ್ಯಾಮೋಹ, ದುರಾಸೆಗಳೇ ಹೇಸಿಗೆ ಅವರ ದೃಷ್ಟಿಯಲ್ಲಿ. ಅವುಗಳಿಂದ ದೂರವಿದ್ದು ಹಾಸಿಗೆ ಯಿದ್ದಷ್ಟು ಕಾಲುಚಾಚುವ ಸ್ವಭಾವವನ್ನೂ, ವೈರಾಗ್ಯವನ್ನೂ ರೂಢಿಸಿಕೊಳ್ಳುವುದು ಉತ್ತಮ ಬದುಕಿನ ಲಕ್ಷಣ. ತೋರಿಕೆಯ ಆಚರಣೆ, ಡಂಭಾಚಾರಗಳಿಗೆ ಪುರಂದರದಾಸರ ವಿರೋಧವಿದೆ. ಮಡಿಹುಡಿ ಪೂಜೆ ಪುರಸ್ಕಾರಗಳಿಗೆ, ಮೂಲ ಆಶಯಗಳನ್ನೇ ಕಳೆದು ಕೊಂಡು ಜಡ್ಡುಗಟ್ಟಿದ್ದ ಜೀವನಮೌಲ್ಯಗಳಿಗೆ ದಾಸರು ಹೊಸ ಅರ್ಥವನ್ನು ಕೊಟ್ಟು ತಮ್ಮ ವೈಚಾರಿಕ ನಿಲುವನ್ನು ಸ್ಪಷ್ಟಪಡಿಸಿದ್ದಾರೆ. ನೀರು ಕಂಡಲ್ಲಿ ಮುಳುಗಿ, ಬಟ್ಟೆಯನ್ನು ನೀರೊಳಗದ್ದಿ ಒಣಗಿಸಿ ಉಟ್ಟು 'ಮಡಿ ಮಡಿ' ಎಂದು ಹಾರಾಡುವವರನ್ನು ಕುರಿತು, **ಚರ್ಮವ ತೊಳೆದರೆ ಕರ್ಮವು ಹೋಹುದೆ?, ಸ್ನಾನ ಮಾಡಿರೋ ಜ್ಞಾನತೀರ್ಥದಲ್ಲಿ, ಸತ್ಯವೆಂಬುದೆ ಸ್ನಾನ ಉಪವಾಸ ಜಪನೇಮ** – ಎನ್ನುತ್ತ ರೂಢಿಗತ ಮೌಲ್ಯಗಳಿಗೂ ಆಚರಣೆಗಳಿಗೂ ತಳುಕು ಹಾಕಿ ಆ ಮೌಲ್ಯಗಳಿಗೆ ಹೊಸ ಅರ್ಥವನ್ನು ಕೊಟ್ಟರು. **ಧನವ ಗಳಿಸಬೇಕಿಂಥದು... ಕಳ್ಳರೊಯ್ಯದಂಥದು, ಧರ್ಮವೆಂಬ ಸಂಬಳವ ಗಳಿಸಿಕೊಳ್ಳಿರೊ** ಎಂದು ಕರೆಕೊಟ್ಟಿರುವರು.

ಕನ್ನಡ ನಾಡು–ನುಡಿಗಳಿಗೆ ಪುರಂದರದಾಸರು ಸಲ್ಲಿಸಿರುವ ಸೇವೆ ಅಪಾರ. ಕನ್ನಡ ಭಾಷೆಯಲ್ಲಿ, ವೇದೋಪನಿಷತ್ತುಗಳ, ಮಾಧ್ವ ತತ್ತ್ವಗ್ರಂಥಗಳ ಸಾರವನ್ನು ತಮ್ಮ ಕೀರ್ತನೆಗಳಲ್ಲಿ ಭಟ್ಟಿಯಿಳಿಸಿ ಕೊಟ್ಟಿದ್ದಾರೆ. ಜನರ ಆಡುಮಾತಿನಲ್ಲಿ ಭಕ್ತಿ ತತ್ತ್ವ ಧರ್ಮಗಳನ್ನು ಜನರ ಮನೆಮನಗಳಿಗೆ ತಂದು ಮುಟ್ಟಿಸಿದ್ದಾರೆ. ಅನ್ಯಮತೀಯರ ಆಕ್ರಮಣ, ಬಲವಂತದ ಮತಾಂತರ, ಅತ್ಯಾಚಾರ, ಕೊಲೆ ಸುಲಿಗೆಗಳಿಂದ ಜರ್ಝರಿತವಾಗಿದ್ದ ಆ ಕಾಲದ ಸಮಾಜಕ್ಕೆ ದಾಸರು ಹರಿಭಕ್ತಿಯ ಆಲಂಬನೆಯನ್ನಿತ್ತದ್ದು ಬಹಳ ದೊಡ್ಡ ವಿಚಾರ.

ದಾಸರ ಕಾಲದಲ್ಲಿ ರಾಜಕೀಯ ವೈಭವ ಮುಗಿಲು ಮುಟ್ಟಿ ದ್ದರೂ ಜನಸಾಮಾನ್ಯರ ಬದುಕು ದುರ್ಭರವಾಗಿತ್ತು. ಹಣ ಅಂತಸ್ತು ಅಧಿಕಾರಗಳು ಸೋತು ಹಿಮ್ಮೆಟ್ಟಿದ್ದಾಗ ಈ ಸಂತರ ಪ್ರಾಮಾಣಿಕ ಬದುಕು ಉಪದೇಶಗಳು ಜನಸಾಮಾನ್ಯರ ಜೀವನ ವನ್ನು ಸಹ್ಯವಾಗಿಸಿದವು. ಅದುವರೆಗೆ ಮಠದ ಪರಿಸರದಲ್ಲಿ ಸಂಸ್ಕೃತ ಭಾಷೆಯಲ್ಲಿ ಮಾತ್ರ ಇದ್ದ ಭಕ್ತಿಸಾಹಿತ್ಯವನ್ನು, ಕನ್ನಡಭಾಷೆಯಲ್ಲಿ ತಂದುಕೊಡುವ ಮೂಲಕ, ಕನ್ನಡ ಭಾಷೆಯನ್ನು ಭಕ್ತಿತತ್ತ್ವದ ಧರ್ಮದ ಭಾಷೆಯನ್ನಾಗಿ ಪುರಂದರದಾಸರು ರೂಢಿಸಿದರು.

**ಎರಡೊಂದಾಗದು ರಂಗ**.... ಎಂದು ಮಧ್ವಾಚಾರ್ಯರ ದ್ವೈತ ತತ್ತ್ವದ ಸಾರವನ್ನೇ (ಜೀವ–ಪರಮಾತ್ಮ ಎರಡೂ ಮುಕ್ತಿಯಲ್ಲೂ ಒಂದಾಗದ ವಿಭಿನ್ನ ತತ್ತ್ವಗಳೆಂಬುದನ್ನು) ಸರಳ ಸುಲಭವಾಗಿ ಪುರಂದರದಾಸರು ಹೇಳಿರುವರು. ಇದೇ ತತ್ತ್ವದ ಅರ್ಥವನ್ನು ಜನರಿಗೆ ಮನದಟ್ಟು ಮಾಡಲು ಆ ಹೊತ್ತಿಗಾಗಲೇ ಸಂಸ್ಕೃತದಲ್ಲಿ ಪುಟಗಟ್ಟಲೆ ವ್ಯಾಖ್ಯಾನಗಳು, ವ್ಯಾಖ್ಯಾನಗಳಿಗೆ ವ್ಯಾಖ್ಯಾನಗಳು ಬಂದಿದ್ದವು. ಆದರೆ ಜನಸಾಮಾನ್ಯರಿಗೆ ನಿಲುಕದ ಸಂಸ್ಕೃತ ಭಾಷೆ ಅವರ ಗ್ರಹಿಕೆಗೆ ಅಡ್ಡಿಯಾಗಿತ್ತು. ಹರಿಸರ್ವೋತ್ತಮ, ವಾಯುಜೀವೋತ್ತಮ ತತ್ತ್ವ; ಹರಿನಾಮಸಂಕೀರ್ತನೆಯ ಮಹಿಮೆ; ಪಂಚಭೇದ ತಾರತಮ್ಯ ಮೊದಲಾದ ತತ್ತ್ವಗಳು ಪುರಂದರದಾಸರ ಕೀರ್ತನೆಗಳಲ್ಲಿ ಹಾಸುಹೊಕ್ಕಾಗಿವೆ. **ಸತ್ಯಜಗಕಿದು ಪಂಚಭೇದವು...., ಹರಿನಾಮದರಗಳಿಯು ಹಾರುತಿದೆ ಜಗದಿ..., ಡಂಗುರವ ಸಾರಿ ಹರಿಯ ಡಿಂಗರಿಕರೆಲ್ಲರು**... – ಇಂತಹ ಕೀರ್ತನೆಗಳು ಸಾಕಷ್ಟು ಸಂಖ್ಯೆಯಲ್ಲಿವೆ. ಧರ್ಮಗ್ಲಾನಿಯಾಗುತ್ತಿದ್ದ ಸಂದರ್ಭದಲ್ಲಿ ಕರ್ನಾಟಕ ದಲ್ಲಿ ವೈದಿಕ ಧರ್ಮವನ್ನು ಉಳಿಸಿ ಬೆಳೆಸಿದ ಕೀರ್ತಿಭಾಜನರಲ್ಲಿ ಪುರಂದರದಾಸರು ಮುಖ್ಯರು.

ಪರಿಶುದ್ಧ ಮಾನವೀಯ ಅಂತಃಕರಣವುಳ್ಳ ಪುರಂದರದಾಸರು ಕಷ್ಟಪಡುವವರನ್ನು ಕಂಡರೆ ಕರಗಿ ಹೋಗುವರು. ಅಂಥವರ ಸಂಕಟ ನೋವು ನಿರಾಸೆಗಳನ್ನು ತಾವು ಹಂಚಿಕೊಂಡರು.

**ಮಾನವಜನ್ಮ ದೊಡ್ಡದು ಅದ**
**ಹಾನಿಮಾಡಲು ಬೇಡಿ ಹುಚ್ಚಪ್ಪಗಳಿರಾ**

ಎಂದು ವಿವೇಕ ಹೇಳಿ ಕಷ್ಟಜೀವಿಗಳ ನೆಮ್ಮದಿಯ ಬದುಕಿಗೆ ಹರಿಭಕ್ತಿಯ ಮಹಾಮಾರ್ಗವನ್ನು ತೋರಿಸಿಕೊಟ್ಟಿರುವರು. ಬಡವರು, ಶೋಷಣೆ ಅನಾದರಗಳಿಗೆ ಒಳಗಾದ ಹೆಣ್ಣುಮಕ್ಕಳು ಪುರಂದರದಾಸರ ವಿಶೇಷ ಮರುಕಕ್ಕೆ ಪಾತ್ರರಾಗಿದ್ದಾರೆ. **ರಮಣ ನಿಲ್ಲದ ನಾರಿ ಪರರ ಕಣ್ಣಿಗೆ ಮಾರಿ..., ಎಷ್ಟು ಜಾಣೆಯಾದರೇನು ರೂಪಗುಣಸಂಪನ್ನೆಯಾದರೇನು**... ಎಲ್ಲವೂ ವ್ಯರ್ಥ. ಇತರರ ಸೇವೆಯಲ್ಲೇ ಬಾಳು ಸವೆಸುತ್ತಿದ್ದ ಅಂಥ ಹೆಣ್ಣುಮಕ್ಕಳನ್ನು ಕುರಿತು **ಮಂಡೆ ಬೋಳಾದರೆ ಮನ ಬೋಳೆ?** ಎಂದು ಕೇಳುತ್ತಾ, ವಿಧವೆಯ ತಲೆಬೋಳಿಸಿ ಕೆಂಪುಸೀರೆ ಉಡಿಸುವ ಸಮಾಜದ ಆಚರಣೆಯ ಕ್ರೌರ್ಯವನ್ನು ಪ್ರಶ್ನಿಸಿರುವರು.

ದಾಸರ ಇಂಥ ಕೀರ್ತನೆಗಳಲ್ಲಿ ಆ ಕಾಲದ ಸಾಮಾಜಿಕ ಪರಿಸ್ಥಿತಿ, ಮೌಲ್ಯಗಳ ಅಧೋಗತಿ, ಜಾತಿ ಮತ ಕುಲಗಳ ಬಗೆಗಿನ ಒಣ ಹೆಮ್ಮೆ, ಸ್ತ್ರೀಯರ ಬದುಕಿನ ರೀತಿ, ಅವರ ಸ್ಥಾನಮಾನಗಳು, ಜನಸಾಮಾನ್ಯರ ದೈನಂದಿನ ಬದುಕು – ಎಲ್ಲವೂ ದಾಖಲಾಗಿವೆ. ಮೂರ್ಖರನ್ನು ಡಂಭಾಚಾರಿಗಳನ್ನು ಕಂಡು ದಾಸರು, **ನಗೆಯು ಬರುತಿದೆ ಎನಗೆ, ಜಗದೊಳಿರುವ ಮನುಜರೆಲ್ಲ ಹಗರಣ ಮಾಡು ವುದ ಕಂಡು** ಎಂದು ವಿಷಾದದ ನಗೆ ನಕ್ಕಿದ್ದಾರೆ. ಇಲ್ಲದವರಿಗೆ ಕರೆದುಕೊಡುವುದೇ ಮನುಷ್ಯಧರ್ಮ. **ಧರ್ಮವೇ ಜಯವೆಂಬ ದಿವ್ಯಮಂತ್ರ** – ಇದು ಜನರಿಗೆ ಪುರಂದರದಾಸರ ಸಂದೇಶ. ಅಧರ್ಮದಿಂದ ಮಾಡಿದ ಕರ್ಮ ವ್ಯರ್ಥ.

ಜಾತಿ ಹುಟ್ಟಿನಿಂದ ಬರುವಂಥದಲ್ಲ; ಅವರವರ ಮನೋ ಧರ್ಮ ಸ್ವಭಾವಗಳಿಂದ ನಿರ್ಧಾರವಾಗುವಂಥದೆಂಬ ನಿಲುವು ಪುರಂದರದಾಸರದು. ಹೊಲೆಯರು ಅವರಿವರಲ್ಲ; ಕೋಪಿಷ್ಠರು ಸುಳ್ಳರು, ಕಳ್ಳರು, ವ್ಯಭಿಚಾರಿಗಳೇ ನಿಜವಾದ ಹೊಲೆಯರು. ಧರ್ಮಮಾರ್ಗದಲ್ಲಿ ನಡೆಯುವ ನೀತಿವಂತನೇ ಬ್ರಾಹ್ಮಣ. **ಎಲ್ಲರು ಮಾಡುವುದು ಹೊಟ್ಟೆಗಾಗಿ ಗೇಣು ಬಟ್ಟೆಗಾಗಿ ತುತ್ತು ಹಿಟ್ಟಿಗಾಗಿ** – ನಿಜ. ಇದು ದಾಸರಿಗೆ ಗೊತ್ತು. ಆದರೆ ಅದಕ್ಕಾಗಿ ಧರ್ಮ ನೀತಿಗಳನ್ನು ಬಿಟ್ಟು ಹಿಂಸೆ ಕ್ರೌರ್ಯಗಳಿಗೆ ಇಳಿಯುವ ಕಾರಣವಿಲ್ಲ. ದಾಸರ ಪ್ರಕಾರ ಅಧರ್ಮದ ಗಳಿಕೆ ಗಳಿಕೆಯೇ ಅಲ್ಲ.

ಪುರಂದರದಾಸರನ್ನು 'ಕರ್ನಾಟಕ ಸಂಗೀತ ಪಿತಾಮಹ'ರೆಂದು ಕರೆಯಲಾಗಿದೆ. ಸುಮಾರು ಆರುನೂರು ವರ್ಷಗಳ ಹಿಂದೆ ಖರಹರಪ್ರಿಯರಾಗದಲ್ಲಿದ್ದ ಆರಂಭದ ಪಾಠಗಳನ್ನು ಅಭ್ಯಾಸಗಳ ಗ್ರಹಿಕೆಗೆ ಸುಲಭವಾಗುವಂತೆ ಮಾಯಾಮಾಳವಗೌಳ ರಾಗಕ್ಕೆ ಅಳವಡಿಸಿಕೊಟ್ಟವರು ಪುರಂದರದಾಸರು. ಇಂದಿಗೂ ಅದೇ ಕ್ರಮ ರೂಢಿಯಲ್ಲಿದೆ. ಸರಳೆ ವರಸೆ, ಜಂಟಿ ವರಸೆ, ಅಲಂಕಾರಗಳು, ಗೀತೆಗಳು – ಈ ಕ್ರಮದಲ್ಲಿ ಪಠ್ಯವನ್ನು ಅವರು ಸಿದ್ಧಪಡಿಸಿ ಕೊಟ್ಟಿರುವರು. ಸಂಗೀತ ಶಾಸ್ತ್ರಕಾರ ತುಳಜಾಜಿ, 'ಸಂಗೀತ ಸಾರಾಮೃತ'ದಲ್ಲಿ, ತನ್ನ ಲಕ್ಷಣಗಳಿಗೆ ಪುರಂದರದಾಸರ ಸಾಹಿತ್ಯವೇ ಲಕ್ಷ್ಯಗಳೆಂದು ಹೇಳಿದ್ದಾನೆ. ದಾಸರ 'ಕೀರ್ತನೆ'ಯ ಪ್ರಕಾರವೇ ಮುಂದೆ ಬಂದ 'ಕೃತಿ'ಗಳಿಗೆ ಮಾದರಿ; ದಾಸರ ವಿರಹಗೀತೆಗಳೇ 'ಜಾವಳಿ'ಗಳಿಗೆ ಸ್ಫೂರ್ತಿ. ಕ್ಷೇತ್ರಯ್ಯ, ಗಿರಿರಾಜ, ತ್ಯಾಗರಾಜರೇ ಮೊದಲಾದ ವಾಗ್ಗೇಯಕಾರರು ಪುರಂದರದಾಸರ ಕೀರ್ತನೆಗಳಿಂದ ನೇರವಾಗಿ ಪ್ರಭಾವಿತರಾಗಿರುವರು.

ದಾಸರು ಬಳಸಿರುವ ಪೂರ್ವಿ, ಪಹಾಡಿ, ಆಹಿರಿ, ಜಂಝೂಟಿ ಇತ್ಯಾದಿ ಬತ್ತೀಸ (ಮೂವತ್ತೆರಡು) ರಾಗಗಳು; ತ್ರಿಶ್ರ ಮಿಶ್ರ ಖಂಡ ಚತುರಶ್ರ ನಡೆಗಳಲ್ಲಿ ಛಾಪುತಾಳದ ಬಳಕೆ; ಸುಳಾದಿ ಸಪ್ತತಾಳಗಳು, ಸಂಗೀತ ಪ್ರಬಂಧಗಳು ಕರ್ನಾಟಕ ಶಾಸ್ತ್ರೀಯ ಸಂಗೀತವನ್ನು ಸಮೃದ್ಧವಾಗಿಸಿವೆ. 'ಸುಳಾದಿ' ಪ್ರಬಂಧ ಕರ್ನಾಟಕ ಸಂಗೀತಕ್ಕೆ ಹರಿದಾಸರ ವಿಶಿಷ್ಟ ಕೊಡುಗೆಯೇ ಆಗಿದೆ. ಹೀಗೆ ಕನ್ನಡ ಭಾಷೆಯನ್ನು ಸಂಗೀತದ ಭಾಷೆಯಾಗಿ ಮಾಡುವಲ್ಲಿ ಶ್ರೀಪಾದರಾಜರು, ವ್ಯಾಸರಾಯರುಗಳ ಜೊತೆಗೆ ಪುರಂದರದಾಸರೂ ಕೈಜೋಡಿಸಿದ್ದಾರೆ. ಕರ್ನಾಟಕ ಸಂಗೀತ ಕಲಿಕಾಪದ್ಧತಿಗೆ ಒಂದು ಸುದೃಢ ವ್ಯವಸ್ಥೆಯನ್ನು ಕಲ್ಪಿಸಿದ್ದಾರೆ. ಮದ್ರಾಸ್ ಮ್ಯೂಸಿಕ್ ಅಕಾಡೆಮಿ ಪುರಂದರದಾಸರನ್ನು, "ರಾಷ್ಟ್ರದ ಹೆಮ್ಮೆಯಾದ ಇಂತಹ ಯುಗಪುರುಷರನ್ನು ಲಕ್ಷಲಕ್ಷ ವರ್ಷಗಳಿಗೊಮ್ಮೆ ಪಡೆಯುವುದು ಕಾಲದ ಭಾಗ್ಯ; ರಾಷ್ಟ್ರದ ಪುಣ್ಯ" ಎಂದು ಹಾಡಿ ಹೊಗಳಿದೆ. ಆ ಪುಣ್ಯ ಭಾಗ್ಯಗಳು ಕರ್ನಾಟಕ ಮೂಲದಿಂದ ದೊರೆತಿವೆಯೆಂಬುದು ಕನ್ನಡಿಗರ ಹೆಮ್ಮೆಗೆ ಮೂಡಿರುವ ಮತ್ತೊಂದು ಗರಿ.

ಪುರಂದರದಾಸರ ಕೃತಿಗಳ ಮೂಲ ಸೆಲೆ ಹರಿಭಕ್ತಿಯಾದರೂ ಅವರು ಜನರಿಗೆ ಪರಿಚಯವಿರುವ ಪುರಾಣ ಪುಣ್ಯಕಥೆಗಳ ಮೂಲಕ ಜೀವನಾನುಭವವನ್ನು ಹೇಳಿರುವ, ಸನ್ನಡತೆ ಸದಾಚಾರಗಳನ್ನು ಬೋಧಿಸಿರುವ ತಂತ್ರ ಅತ್ಯಂತ ಪರಿಣಾಮಕಾರಿಯಾಗಿದೆ. ಅದಕ್ಕಾಗಿ ದಾಸರು ಬಳಸಿಕೊಂಡಿರುವ ರಾಮಾಯಣ ಮಹಾಭಾರತ ಭಾಗವತಾದಿಗಳ ಸ್ಥೂಲ ಪರಿಚಯವಾದರೂ ಇಲ್ಲದ ಭಾರತೀಯನು ಯಾರೂ ಇಲ್ಲವೆಂದರೂ ಸಲ್ಲುತ್ತದೆ.

ಬಲಿಯ ಮನೆಗೆ ವಾಮನ ಬಂದಂತೆ
ಭಗೀರಥಗೆ ಶ್ರೀಗಂಗೆ ಬಂದಂತೆ
ಮುಚುಕುಂದಗೆ ಶ್ರೀಮುಕುಂದ ಬಂದಂತೆ
ವಿಭೀಷಣನ ಮನೆಗೆ ಶ್ರೀರಾಮ ಬಂದಂತೆ
ನಿನ್ನ ನಾಮವು ಬಂದೆನ್ನ ನಾಲಗೆಯಲಿ ನಿಲ್ಲಲಿ

ಎಂದು ಬೇಡಿಕೊಳ್ಳುವರು. ಈ ಉಗಾಭೋಗವನ್ನು ಕೇಳಿದ ಕೂಡಲೇ ತಟ್ಟನೆ ಅರ್ಥ ಬಿಚ್ಚಿಕೊಳ್ಳುತ್ತದೆ. ಹಾಗೆಯೇ ಮನುಷ್ಯನ ಅಹಂಕಾರವನ್ನು ಮುರಿಯುತ್ತಾ, **ರೂಪದಲಿ ಮನ್ಮಥನೆ.... ಬಲದಲ್ಲಿ ವಾಲಿಯೆ.... ದಾನದಲಿ ಕರ್ಣನೆ.... ಛಲದಲ್ಲಿ ದುರ್ಯೋಧನನೆ....** ನಿನ್ನನ್ನು ನೀನು ಏನೆಂದು ತಿಳಿದಿದ್ದೀಯೆ ಎಂದು ಕೇಳುವ ಮೂಲಕ ಅವನ ಅಹಂಕಾರವೆಲ್ಲ ಸೋರಿಹೋಗುವಂತೆ ಮಾಡಿದ್ದಾರೆ.

ಪುರಂದರದಾಸರ ಕೀರ್ತನೆಗಳ ವಸ್ತುವಾಗದ ವಸ್ತುವೇ ಇಲ್ಲ. **ವವ್ವಾರೆ ಮೆಣಸಿನಕಾಯಿ**... ಎಂದು ಮೆಣಸಿನಕಾಯಿಯನ್ನೂ ಕಾವ್ಯವಸ್ತುವಾಗಿ ಮಾಡಿಬಿಟ್ಟಿದ್ದಾರೆ. ಪುರಂದರದಾಸರ ಕೃತಿಗಳು ಅರ್ಥಶ್ರೀಮಂತಿಕೆ ಭಾವಸಮೃದ್ಧಿಗಳಿಂದ ರಸ ಒಸರುವ ಗೇಯರಚನೆಗಳು. **ಗಂಗಾಜನಕನಿಗೆ ಗಡಿಗೆ ನೀರೆರೆಯುವ, ಅಕ್ಷಯಾಂಬರವಿತ್ತವಗೆ ಹೊಂಬಟ್ಟೆಯುಡಿಸುವ, ಪಾಲ್ಗಡಲೊಡೆಯನಿಗೆ ಹಾಲಿನ ನೈವೇದ್ಯವಿಡುವ** ಯಶೋದೆಯ ಸುಕೃತವನ್ನು ಎಷ್ಟು ವರ್ಣಿಸಿದರೂ ದಾಸರಿಗೆ ತೃಪ್ತಿಯಿಲ್ಲ. **ಹಣ್ಣು ಬಂದಿದೆ ಕೊಳ್ಳಿರೋ ನೀವೀಗ** ಎಂದು ಎಲ್ಲರನ್ನೂ ಕರೆಯುವರು. **ಜವನ ಅಂಜಿಪ ಹಣ್ಣು; ಭವರೋಗಗಳನೆಲ್ಲ ಕಳೆಯುವ ಚಿನ್ನ ಬಾಲ ಕೃಷ್ಣನೆಂಬೋ ಚೆನ್ನಾದ ಬಾಳೆಯಹಣ್ಣು** ಅದು. ಕೆಡದ, ಕೊಳೆಯದ, ಬಿತ್ತಿ ಬೆಳೆಯಬೇಕಾಗಿಲ್ಲದ ಪುಕ್ಕಟ್ಟೆ ದೊರೆಯುವ ಶ್ರೇಷ್ಠವಾದ ಮಾವಿನ ಹಣ್ಣು, ತೆಗೆದುಕೊಳ್ಳಿ ಬನ್ನಿ ಎಂದು ಕರೆಯುತ್ತಿರುವರು. ಶ್ರೀಕೃಷ್ಣನನ್ನು 'ಆನೆ'ಯೆಂದು ರೂಪಕಮಾಡಿ **ಆನೆ ಬಂದಿತಮ್ಮ ಮರಿಯಾನೆ ಬಂದಿತಮ್ಮ** ಎಂದು ಆನಂದದಿಂದ ಹಾಡಿರುವರು. ಪುರಂದರದಾಸರ ಕೃತಿಗಳಲ್ಲಿಯ ಪ್ರಾಮಾಣಿಕತೆ ಸರಳತೆ, ಭಾವತೀವ್ರತೆಗಳೇ ಅವುಗಳಿಗೆ ಕಲಾತ್ಮಕತೆಯನ್ನು ತಂದು ಕೊಟ್ಟಿವೆ.

ಹೀಗೆ, ಭಕ್ತಿ ತತ್ತ್ವ, ಧರ್ಮ, ಮೌಲ್ಯ, ಸಂಗೀತ, ಸಾಹಿತ್ಯ, ಸಂಸ್ಕೃತಿ – ಎಲ್ಲವನ್ನೂ ಒಟ್ಟೊಟ್ಟಿಗೇ ಶ್ರೀಮಂತಗೊಳಿಸಿದ ಧೀಮಂತ ವ್ಯಕ್ತಿತ್ವ ಪುರಂದರದಾಸರದು. ಅವರು ಒಳಹೊರಗೊಂದಾಗಿ ನುಡಿದವರು; ನಡೆದವರು. ಇಂಥ ಶಿಷ್ಯರನ್ನು ಪಡೆದ ವ್ಯಾಸರಾಯರು ಧನ್ಯರು. **ದಾಸರೆಂದರೆ ಪುರಂದರದಾಸರಯ್ಯಾ** ಎಂದು ಮನದುಂಬಿ ಹರಸಿ ಆನಂದಪಟ್ಟರು. ಗುರು–ಶಿಷ್ಯರ ಈ ಸೌಹಾರ್ದ ಪ್ರೀತಿ, ಸಂಬಂಧಗಳು ಅನುಕರಣೀಯ.

**ವಿಷವಿಕ್ಕಿದವಗೆ ಷಡ್ರಸವನುಣಿಸುವ, ಮೋಸಮಾಡುವವನ್ಹೆಸರ ಮಗನಿಗಿಡುವ, ಕಂಡು ಸಹಿಸದವರ ಮನೆಗೆ ಕರೆಯುವ** ಆದರ್ಶವನ್ನು ಪುರಂದರದಾಸರು ನಮ್ಮ ಮುಂದಿಟ್ಟಿರುವರು. ಮತ್ತು, ತಮ್ಮ ಎಲ್ಲ ವಿಚಾರಗಳನ್ನೂ ಸುಲಭಗ್ರಾಹ್ಯವಾಗುವ ಹಾಗೆ ಸರಳ ಸುಲಭವಾಗಿ ಸಂಗೀತದ ಹಿನ್ನೆಲೆಯಲ್ಲಿ ಹೇಳಿರುವುದರಿಂದ ಅವುಗಳನ್ನು ನೆನಪಿನಲ್ಲಿಟ್ಟು ಮತ್ತೆ ಮತ್ತೆ ಮನನ ಮಾಡಿ ಬದುಕಿನಲ್ಲಿ ಅಳವಡಿಸಿಕೊಳ್ಳುವುದು ಸುಲಭ. ಇಂತಹ ಪುರಂದರದಾಸರನ್ನು **ನೆನೆವುದೇ ಪುಣ್ಯ ; ಪಾಡುವುದೇ ಶುಭಕಾರ್ಯ**.